ಪ್ರವಚನ ಮಂದಿರಕ್ಕೆ ಎದುರಿನ ಬಾಗಿಲಿನಿಂದಲೇ ನುಸುಳಿದರು ಗೋವಿಂದಯ್ಯ. ಕ್ಷಣಕಾಲ ಕಕ್ಕಾಬಿಕ್ಕಿಯಾದವರೆ ದಾರಿ ತೋಚದೆ ಮುಂದಿನ ಸಾಲಿನಲ್ಲಿ ಖಾಲಿಯಾಗಿದ್ದ ಒಂದು ಆಸನವನ್ನು ಅವಸರದಲ್ಲಿ ಆಕ್ರಮಿಸಿದರು.

ಬಿಸಿ ಏದುಸಿರು ಇನ್ನೂ ಕಡಿಮೆಯಾಗಿರಲಿಲ್ಲ. ಬೆವರ ಹನಿ ಹಣೆಯ ನಾಮದ ಸುತ್ತ ಮಣಿದ ಮಾಲೆಯಂತೆ ಹೊಳೆಯುತ್ತಿದೆ. ಉತ್ತರೀಯದಿಂದ ಅದನ್ನೊರೆಸಲು ಮರೆತರು. ತುಸು ಗಾಳಿ ಬೀಸಿಕೊಳ್ಳುವುದನ್ನೂ ಮರೆತರು.

ಅವರೆಂದೂ ಹೀಗೆ ತಡವಾಗಿ ಬಂದವರೂ ಅಲ್ಲ. ಮುಂದಿನ ಸಾಲಿನ ಆಸನದಲ್ಲಿ ಕುಳಿತವರೂ ಅಲ್ಲ.

ಗುರುಗಳು ಬಂದು ಅವರಿಗಿರಿಸಿದ ಪದ್ಮಾಸನದಲ್ಲಿ ಕುಳಿತು 'ಪ್ರಾರಂಭವಾಗಲಿ' ಎಂದು ಕೈಸನ್ನೆಯಿಂದಲೆ ಸೂಚಿಸುವ ಮೊದಲೇ ಗೋವಿಂದಯ್ಯ ಮತ್ತವರ ಓರಗೆಯ ವೃದ್ಧ ಹಿರಿಯರೆಲ್ಲ ಪದ್ಮಾಸನದ ಸುತ್ತ ನೆಲದ ಮೇಲೆ ಭದ್ರವಾಗಿ ಕುಳಿತು, ತುಸು ಲೋಕಾಭಿರಾಮ ನಡೆಸಿ ಇನ್ನೇನು ಗುರುಗಳು ಹೊರಮೆಟ್ಟಿಲೇರಿ ಬರುತ್ತಿದ್ದಾರೆ ಎಂದೆನ್ನಿಸುವಷ್ಟರಲ್ಲಿ ದಡಬಡ ಎದ್ದು ಅಲ್ಲೇ ಬಗ್ಗಿ ನೆಲಮುಟ್ಟಿ ನಮಸ್ಕರಿಸಿ ಗುರುಗಳ ಆಸನ ಸ್ವೀಕಾರವಾದ ಮೇಲೆಯೆ ನಿಧಾನವಾಗಿ ಕುಳಿತು ಪ್ರವಚನವನ್ನಾಲಿಸುತ್ತಿದ್ದರು.... ಇಂದು?

ಎಂದೂ ಹೀಗಾಗಿರಲೇ ಇಲ್ಲ... ಅರೆಕ್ಷಣ ತಡವಾಗಿ ಬಂದುದಕ್ಕೆ ಇದು ಪ್ರಾಯಶ್ಚಿತ್ತವೇ...

ವಿಳಂಬವಾಗಿದೆ... ಗುರುಗಳು ಕುಳಿತಾಗಲೇ ಇನ್ನು ಸಮ್ಮುಖ ಮುಖ ತೋರಿಸುವುದು ಸಮಂಜಸವಲ್ಲ... ಅದೂ ಎಂದೂ ತೋರಿ ಬರದ, ಪ್ರವಚನ ಮಂದಿರದಲ್ಲಿ ಅವರು ಕಾಣದ, ಇಂದು ಮಾತ್ರ ಕಂಡ – ವಿಪರೀತ ದೃಶ್ಯ. ಮನಸ್ಸನ್ನೆಲ್ಲ ಆಕ್ರಮಿಸಿರುವಾಗ ಮನಸ್ಸೆಲ್ಲ ರಾಡಿಯಾಗಿರುವಾಗ ತಡವಾಗಿ ಬಂದ ಪಾಪಕ್ಕೆ ಶಾಪವೆಂಬಂತೆ ಕಂಡ ದೃಶ್ಯ ಎದೆಯನ್ನೆ ಕೊರೆಯುತ್ತಿರುವಾಗ...

ಹಾಗೆಂದೆ, ಎಂದೂ ಎಲ್ಲರೂ ಬಂದು ಆರಾಮವಾಗಿ ಕುಳಿತುಕೊಳ್ಳುತ್ತಿದ್ದ ಕುರ್ಚಿಯನ್ನು ಆಶ್ರಯಿಸದ ಗೋವಿಂದಯ್ಯ, ಇಂದೀಗ ಉಪಾಯವಿಲ್ಲದೆ ಇಂಥ ಖಾಲಿ ಕುರ್ಚಿಯೊಂದರಲ್ಲಿ ಸರಿಗೆ ಮೇಲೆ ನಡೆಯುವವನಂತೆ ಕುಳಿತು ಚಡಪಡಿಸುತ್ತಿದ್ದಾರೆ. ಅತ್ತಿತ್ತ ನೋಡುವುದಕ್ಕೂ ಮನಸ್ಸಾಗಲಿಲ್ಲ. ಎಲ್ಲಾದರೂ ಗುರುಗಳು ಕಂಡು.... 'ಅಲ್ಯಾಕೆ .... ಬನ್ನಿ ಇತ್ತ' ಎಂದು ಎಂದಿನ ಮಮತೆಯಿಂದ ಕಣ್ಸನ್ನೆಯಿಂದಲೇ ಕರೆದರೆ? ಏಳುವುದಕ್ಕೇ ಶಕ್ತಿ ಇಲ್ಲವಾಗಿದೆಯಲ್ಲ...

ಬದಿಯ ಆಸನದಲ್ಲಿಯೇ ಕುಳಿತಿದ್ದ – ಪುಟ್ಟ ಮಗುವಾಗಿದ್ದಂದಿನಿಂದಲೂ ಅವರು ಕಂಡ ನನ್ನ ಅಸ್ತಿತ್ವದ ಅರಿವೂ ಒಳಗೆ ಬಂದಾಕ್ಷಣ ಆಗಲಿಲ್ಲವಲ್ಲ ಗೋವಿಂದಯ್ಯನಿಗೆ....

ಹಾಂ.... ಕಾರಣವಿದೆ. ಎಂದೂ ಹೀಗೆಲ್ಲ ಪ್ರವಚನಕ್ಕೆ ಬಾರದವ ನಾನು, ಇಂದು ಬಂದದ್ದು ಅವರಿಗೆ ಅನಿರೀಕ್ಷಿತವೆ. ಮುಂದೆ ನಡೆಯಲಿರುವ ನನ್ನ ಪರಿಚಿತರ ನೃತ್ಯಕ್ಕಾಗಿ ಮುಂದಿನ ಸಾಲೇ ಸಿಗಲೆಂದು ಬಂದು ನಾನು ಕುಳಿತದ್ದು ನನಗೆ ಹಿರಿಯರಾಗಿರುವ ಗೋವಿಂದಯ್ಯನ ಇಂದಿನ ದುಗುಡಕ್ಕೆ ಸಾಕ್ಷಿಯಾಗುವಂತಾಯಿತಲ್ಲ... ನನ್ನನ್ನು ಪ್ರೀತಿಯಿಂದ ಸದಾ ಕಾಣುವ ನಾನೂ, ತುಂಬ ಪೂಜ್ಯ ಭಾವನೆಯಿಂದ ಗೌರವಿಸುತ್ತಿರುವ ಈ ಹಿರಿಯರಿಗೆ ನನ್ನ ಸ್ಪಂದನ ಅಗತ್ಯವಾಗುತ್ತಿರುವುದೂ ಒಂದು ಯೋಗಾಯೋಗವೆ. ಎದ್ದು ಹೊರಡಲು ಅಣಿಯಾಗುತ್ತಿರುವವರಿಗೆ ಅನಾಥ ರಕ್ಷಕನಂತೆ ಬಲಬದಿಯಲ್ಲಿದ್ದ ನನ್ನ ಅರಿವಿಗೆ ಕುಳಿತವರೆ ನನ್ನ ಎಡಗೈಯನ್ನು ಬಲವಾಗಿ ಹಿಡಿದು ಪಿಸುದನಿಯಲ್ಲಿ ಏನೇನೋ ಬಡಬಡಿಸ ತೊಡಗಿದರು, ಹಾವು ಕಡಿದವರಂತೆ.

'ಮಾರಾಯ ಮಾರಾಯ. ತಡವಾಗಿ ಬಂದದ್ದಕ್ಕೆ ತಕ್ಕ ಪ್ರಾಯಶ್ಚಿತ್ತ.... ಸಾಕು... ಸಾಕು... ಈ ಜನ್ಮಕ್ಕೆ ಸಾಕು...'. ತಲೆಬುಡವಿಲ್ಲದ ಆಕ್ರಂದನ.

'ನೋಡು ನೋಡು.... ಅಣ್ಣಯ್ಯ (ನನ್ನನ್ನವರು ಕರೆಯುವುದು ಹಾಗೆ) ನನ್ನ ಎಡಬದಿ... ಎಡಕ್ಕೆ....'

ಏನಪ್ಪ ಗಂಡಾಂತರ.... ಗಟ್ಟಿಯಾಗಿ ಕೇಳುವ ಹಾಗಿಲ್ಲ... ಆಗಲೇ ವೇದಿಕೆಯ ಮೇಲೆ ವ್ಯಾಸಪೀಠದೆದುರು ಕುಳಿತವರ ಗಂಭೀರ ಸ್ವರದಲ್ಲಿ ಪ್ರವಚನದ ರಸ ಕ್ಷಣಗಳು ಕಾವು ಪಡೆಯುತ್ತಿದ್ದವು.

ಮುನಿ ಪರಾಶರರು ನಾವೆ ಹತ್ತಿದ್ದಾರೆ. ನಾವೆ ನಡೆಸುತ್ತಿದ್ದ ನಾರಿಯನ್ನು ಎವೆಯಿಕ್ಕದೆ ದಿಟ್ಟಿಸುತ್ತಿದ್ದಾರೆ... ಒಂದು ಮಹಾ ಸಂಕಲ್ಪಕ್ಕೆ ಸಿದ್ಧರಾಗುತ್ತಿದ್ದಾರೆ. 'ಸಂಗಮಂ ಮಮ ಕಲ್ಯಾಣಿ ಕುರುಷ್ವ– ಏಕೆ ಈ ನಾಚುಗೆ ಬಾ ಬಾರೆ ಬಳಿಗೆ ಬಾಲಿಕೆ' ಎಂದೆಲ್ಲ ಅನುನಯದಿಂದ ಕೇಳಿಕೊಳ್ಳುತ್ತಿದ್ದಾರೆ.

ಇಂಥದ್ದರಲ್ಲಿ ಬಿಸಿಯುಸಿರಿನ ಗೋವಿಂದಯ್ಯನ ಅಳಲನ್ನು ಹೇಗೆ ಕೇಳಿಸಿಕೊಳ್ಳುವುದು.... ಕೇಳುವಂತಿಲ್ಲ ಕೇಳದಿರುವಂತಿಲ್ಲ. ಮತ್ತೆ ಮತ್ತೆ ಕುಳಿತ ಆಸನದಲ್ಲೆ ನನ್ನ ಬಳಿ ಸರಿಯುತ್ತ ನನ್ನ ಎಡಕಿವಿಗೆ ತನ್ನ ಕಂಪಿಸುತ್ತಿರುವ ತುಟಿ ತಾಗಿಸಿ ಪಿಸುಗುಟ್ಟುತ್ತ ಹೇಳತೊಡಗಿದರು '..... ಸಾಕು.... ಸಾಕು.... ಯಾವ ಜನ್ಮದ ಪಾಪವೊ....'

ಪ್ರವಚನದ ರಮ್ಯತೆಯ ಸೆಳೆತಕ್ಕೆ ಎಲ್ಲರೂ ಒಳಗಾಗಿರುವುದರಿಂದ ಮತ್ತು ಧ್ವನಿವರ್ಧಕ ಅಬ್ಬರವೂ ಹರಡಿರುವುದರಿಂದ ಈ ಪಿಸು ಪಿಸು ಯಾರನ್ನೂ ಕೆಣಕಿರಲಿಲ್ಲ. ಅವರವರ ಪಾಡಿಗೆ ನಮ್ಮ ಆಚೀಚಿನವರೆಲ್ಲ ಪ್ರವಚನದಲ್ಲಿ ತಲ್ಲೀನರಾಗಿರುವಾಗ ಗೋವಿಂದಯ್ಯನಿಗೆ ಮಾತು ಮುಂದುವರಿಸಲು ಸುಲಭವಾಗಿ ಸಾಧ್ಯವಾಯಿತು.

'ಇಗ.... ಇಗ... ನೋಡಿದೆಯಾ... ನನ್ನ ಎಡಗಡೆ.... ಎಡಕ್ಕೆ....'

ನಾನು ಕುಳಿತಲ್ಲಿಂದಲೆ ಕಣ್ಣು ಹೊರಳಿಸುವುದು ಅನಿವಾರ್ಯವಾಯಿತು. ಕಷ್ಟಪಟ್ಟು ಸಾಧ್ಯವೂ ಆಯಿತು.

ವಿಶೇಷವೇನೂ ಇರಲಿಲ್ಲ. ನಾನು ಒಳಗೆ ಬಂದಾಗಲೇ ಕಂಡಿದ್ದೆ... ನಾನು ಆಯ್ಕೆ ಮಾಡಿದ ಆಸನದ ಎಡಕ್ಕೆ ಒಂದು ಆಸನ ಬಿಟ್ಟು ಅದೇ ಈಗ ಗೋವಿಂದಯ್ಯ ಕುಳಿತ ಆಸನದ ಎಡಗಡೆಯ ಎರಡು ಆಸನಗಳಲ್ಲಿ ಆ ಇಬ್ಬರು ವಿದೇಶೀಯ – ಯುವಕ ಯುವತಿ ಕುಳಿತಿದ್ದರು. ಈ ದಿನಗಳಲ್ಲಿ ಸಾಮಾನ್ಯವಾದ ನೋಟ... ನಮ್ಮೂರ ಜಾತ್ರೆ ಸಡಗರದಲ್ಲಿ ಯಾವ್ಯಾವುದೋ ಪರದೇಶಗಳ ಬಿಳಿಯ ಪ್ರವಾಸಿಗರು ಬರುವುದು, ಅಚ್ಚರಿಯಿಂದ ಎಲ್ಲವನ್ನೂ ಗಮನಿಸುವುದು. ಫೋಟೊ ತೆಗೆಯುವುದು ಎಲ್ಲ ಮಹಾ ವಿಶೇಷವಿಲ್ಲದ ದೃಶ್ಯವಾಗಿತ್ತು. ಹಾಗಾಗಿಯೋ ಏನೋ ಅಥವಾ ನನ್ನ ಸ್ವಭಾವಕ್ಕನು ಗುಣವಾಗಿಯೋ ಏನೋ ಕುಳಿತ ಅವರನ್ನು ಗಮನಿಸದೆ ನನ್ನ ಪಾಡಿಗೆ ಬಂದು ಕುಳಿತಿದ್ದೆ.

ಆದರೆ.... ನನ್ನ ನಂತರ ತಡವಾಗಿ ಅವಸರ ಅವಸರದಲ್ಲಿ ಒಳನುಗ್ಗಿದ ಗೋವಿಂದಯ್ಯ ಕಂಡ ದೃಶ್ಯ ಅವರ ಮಟ್ಟಿಗಂತೂ ಖಂಡಿತಾ ಅವಗಣಿಸುವಂತಿಲ್ಲ. ಮೊದಲೇ ವಿಳಂಬವಾದ ಆತಂಕ. ಗುರುಗಳು ಬಂದಾಗಿದೆ. ಪ್ರವಚನದ ಪ್ರಾರಂಭಕ್ಕೆ ಸೂಚಿಸಿಯಾಗಿದೆ.... ಪ್ರಾರ್ಥನಾ ಶ್ಲೋಕ ಪ್ರಾರಂಭವಾಗಿದೆ.... ಸರಿ.... ಇನ್ನು ಮುಂದಡಿ ಸರಿಯಲ್ಲ... ಕಂಡ ಖಾಲಿ ಕುರ್ಚಿಯೇ ಗತಿ ಎಂದು ದಾಪುಗಾಲು ಹಾಕುವಷ್ಟರಲ್ಲಿ ಅವರ ಕಣ್ಣಿಗೆ ಬಿದ್ದ ಅಚಾತುರ್ಯ ನಡೆದು ಹೋಗಿತ್ತು.

ಆ ಗಾಬರಿಯಲ್ಲೇ ನನ್ನ ರಕ್ಷಣೆ ಪಡೆದು ಗೋಗರೆಯುತ್ತ 'ಮಾರಾಯ... ಬಲಬದಿ.... ಬಲ, ಅಲ್ಲ, ಎಡ ಎಡ....' ಎಂಬ ಪಲ್ಲವಿ ಪ್ರಾರಂಭಿಸಿದ್ದರಿಂದ ಕಣ್ಣು ಹೊರಳಿಸಿ ಕಂಡವನೆ.... 'ಗೋವಿಂದಜ್ಜ (ಬಾಲ್ಯದಿಂದಲೂ ಅಜ್ಜ ಎಂದೇ ಕರೆಯುತ್ತಿದ್ದೆ).... ಇದರಲ್ಲಿ ವಿಶೇಷವೇನಿಲ್ಲ. ತುಂಬ ಜನ ವಿದೇಶೀ ಪ್ರವಾಸಿಗರು ಆಗಾಗ್ಗೆ ಬರುತ್ತಿದ್ದಾರಲ್ಲಾ.... ನೀವೂ ಕಂಡಿದ್ದೀರಿ' ಎಂದು ಸಮಾಧಾನ ಪಡಿಸಲು ಪ್ರಯತ್ನಿಸಿದೆ.

ಊಹುಂ. ನನ್ನ ಸಾಂತ್ವನಕ್ಕೆ ಕಿವಿಗೊಡದೆ ಒಂದೇ ಶ್ರುತಿಯಲ್ಲಿ ಗೋವಿಂದಯ್ಯ ಅಳಲನ್ನು ತೋಡಿಕೊಳ್ಳುತ್ತಲೇ ಇದ್ದರು.

'ಯಾವ ಕರ್ಮಕ್ಕೆ ನಾನು ತಡವಾಗಿ ಬಂದೆನೋ. ಅದೂ ಇಲ್ಲಿ?. ಈ ಪುಣ್ಯಸ್ಥಳದಲ್ಲಿ! ಗುರುಗಳೇನಾದರೂ ಕಂಡಿದ್ದರೆ! ನನ್ನ ಕಣ್ಣಿಗೇ ಬೀಳಬೇಕಾ...'

ಇಷ್ಟನ್ನೆಲ್ಲ ಪಿಸುಗುಟ್ಟುವಾಗ ನಡೆದದ್ದೇನೆಂದು ಕೇಳದಿದ್ದರೆ ಹೇಗೆ? ಕಣ್ ಸನ್ನೆಯಲ್ಲೇ ಏನೆಂದು ಕೇಳಿದೆ.

ವಾಂತಿ ಕಟ್ಟಿಕೊಳ್ಳಲಾಗದವರಂತೆ ಮೊದಲೇ ಹೇಳುವ ಆತುರದಲ್ಲಿದ್ದ ಗೋವಿಂದಯ್ಯ ರಥವನ್ನೆಳೆಯುವಂತೆ ನನ್ನನೆಳೆದು ಸಿಡಿಮದ್ದು ಸಿಡಿದಂತೆ ಗುಡುಗಿದರು.

'ಯಾವ ಜನ್ಮದ ಪಾಪವೋ.. ನನ್ನ ಕಣ್ಣುಗಳೇ ಕಾಣಬೇಕಾ.. ಒಳಗೆ ಕಾಲಿರಿಸಿದ್ದೇನಷ್ಟೆ. ಕಣ್ಣಿಗೆ ಬಿತ್ತು ಮಾರಾಯಾ.. ನನ್ನ ಎಡಕ್ಕೆ.. ಎಡಕ್ಕೆ ಕುಳಿತವರು.. ಒಬ್ಬರಿಗೊಬ್ಬರು 'ಕಿಸ್.... ಕಿಸ್' ಕೊಡುತ್ತಿದ್ದರು ಮಾರಾಯ.'

ತಮ್ಮ ಯಾವ ಮಾತುಗಳಲ್ಲಿಯೂ ಆಂಗ್ಲ ಪದ ಬಳಸದ ಗೋವಿಂದಜ್ಜ ಮತ್ತೆ ಮತ್ತೆ 'ಕಿಸ್ ಕಿಸ್' ಎಂದು ಉಸಿರು ಬಿಡದೆ ಹೇಳಿದವರೆ ನನ್ನ ಯಾವ ಪ್ರತಿಕ್ರಿಯೆಗೂ ಕಾಯದೆ ಯಾವುದೋ ಲೋಕಕ್ಕೆ ಅಂತರ್ದಾನವಾಗುವಂತೆ ರಭಸದಿಂದ ಹೊರನಡೆದರು.